ಕಛೇರಿ ದೂರವಾಣಿ : 08392 – 266128
ಫ್ಯಾಕ್ಸ್ : 267200
ಇ-ಮೇಲ್ : admzpbly@gmail.com

# ಜಿಲ್ಲಾ ಪಂಚಾಯತಿ ಬಳ್ಳಾರಿ

ಸಂ.ಜಿಪಂಬ/ಆಡಳಿತ/219/2016–17 ದಿನಾಂಕ:31.08.2017

## ಅಧಿಸೂಚನೆ

ವಿಷಯ: ಬಳ್ಳಾರಿ ಜಿಲ್ಲಾ ಪಂಚಾಯತಿಯ ವಿವಿಧ ಸ್ಥಾಯಿ ಸಮಿತಿಗಳ ಸದಸ್ಯರುಗಳ ಚುನಾವಣೆ ನಡೆಸುವ ಕುರಿತು.

ಉಲ್ಲೇಖ: 1. ಸರ್ಕಾರದ ಪತ್ರ ಸಂ.ಗ್ರಾಅಪ 128 ಜಿಪಸ 2017 ಬೆಂಗಳೂರು ದಿನಾಂಕ:18.05.2017

2. ಸರ್ಕಾರದ ಪತ್ರ ಸಂ.ಗ್ರಾಅಪ 217 ಜಿಪಸ 2017 ಬೆಂಗಳೂರು ದಿನಾಂಕ:13.06.2017

*****

ಬಳ್ಳಾರಿ ಜಿಲ್ಲಾ ಪಂಚಾಯತಿಯ ವಿವಿಧ ಸ್ಥಾಯಿ ಸಮಿತಿಗಳಿಗೆ ಚುನಾವಣೆಗಳನ್ನು ನಡೆಸುವ ಸಂಬಂಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 188(1)ರ ಅನ್ವಯ ಬಳ್ಳಾರಿ ಜಿಲ್ಲಾ ಪಂಚಾಯತಿಯ ಸ್ಥಾಯಿ ಸಮಿತಿಗಳಿಗೆ ಸದಸ್ಯರ ಚುನಾವಣೆ ನಿಯಮಗಳು 2017ಕ್ಕೆ ಉಲ್ಲೇಖದ ಪತ್ರದಲ್ಲಿ ಸರ್ಕಾರದಿಂದ ಅನುಮೋದನೆ ನೀಡಲಾಗಿರುತ್ತದೆ.

ಅದರನ್ವಯ ಸದರಿ ನಿಯಮಗಳ ಅಡಿ ರಚಿಸಲಾಗಿರುವ ಈ ಕೆಳಕಂಡ ಸ್ಥಾಯಿ ಸಮಿತಿಗಳಿಗೆ ಸದಸ್ಯರುಗಳನ್ನು ಆಯ್ಕೆ ಮಾಡುವ ಸಂಬಂಧ ದಿನಾಂಕ:14.09.2017 ರಂದು ಚುನಾವಣೆ ನಡೆಸಲು ನಿರ್ಧರಿಸಲಾಗಿದೆ.

1. ಸಾಮಾನ್ಯ ಸ್ಥಾಯಿ ಸಮಿತಿ
2. ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿ
3. ಸಾಮಾಜಿಕ ನ್ಯಾಯ ಸಮಿತಿ
4. ಶಿಕ್ಷಣ ಮತ್ತು ಆರೋಗ್ಯ ಸಮಿತಿ
5. ಕೃಷಿ ಮತ್ತು ಕೈಗಾರಿಕಾ ಸಮಿತಿ

ಈ ಪತ್ರದೊಂದಿಗೆ ಚುನಾವಣಾ ವೇಳಾಪಟ್ಟಿಯನ್ನು ಲಗತ್ತಿಸಿದೆ. ಅದರನ್ವಯ ಚುನಾವಣೆ ನಡೆಸಲಾಗುವುದು. ಸದರಿ ವೇಳಾ ಪಟ್ಟಿಯಲ್ಲಿ ತಿಳಿಸಿದಂತೆ ಆಯಾ ಸ್ಥಾಯಿ ಸಮಿತಿಗೆ ವಿನಿಯಮ 8ರ ಅನ್ವಯ ವಿವಿಧ ಅಧಿಕಾರಿಗಳನ್ನು "ಗೊತ್ತುಪಡಿಸಿದ ಅಧಿಕಾರಿಗಳು" ಎಂದು ನೇಮಕ ಮಾಡಲಾಗಿದ್ದು, ಅವರುಗಳಿಗೆ ಚುನಾವಣೆಯಲ್ಲಿ ಸ್ಪರ್ಧಿಸಲಿಚ್ಛಿಸುವ ಸದಸ್ಯರುಗಳು ನಿಗದಿಪಡಿಸಿದ ದಿನಾಂಕದಂದು ಮತ್ತು ಸಮಯದೊಳಗೆ ನಾಮಪತ್ರಗಳನ್ನು ಸಲ್ಲಿಸಬಹುದೆಂದು ಈ ಮೂಲಕ ತಿಳಿಯಪಡಿಸಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯತ್, ಬಳ್ಳಾರಿ

ಪ್ರತಿಯನ್ನು

1. ಮಾನ್ಯ ಅಧ್ಯಕ್ಷರು/ಮಾನ್ಯ ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ್, ಬಳ್ಳಾರಿ
2. ಮಾನ್ಯ ಲೋಕಸಭಾ ಸದಸ್ಯರು, ಬಳ್ಳಾರಿ ಅವರಿಗೆ ಮಾಹಿತಿಗಾಗಿ
3. ಜಿಲ್ಲೆಯ ಎಲ್ಲಾ ಮಾನ್ಯ ಶಾಸಕರುಗಳಿಗೆ
4. ಜಿಲ್ಲೆಯ ಎಲ್ಲಾ ಮಾನ್ಯ ಜಿಲ್ಲಾ ಪಂಚಾಯತ್ ಸದಸ್ಯರುಗಳಿಗೆ
5. ಜಿಲ್ಲೆಯ ಎಲ್ಲಾ ತಾಲೂಕು ಪಂಚಾಯತಿ ಅಧ್ಯಕ್ಷರುಗಳಿಗೆ
6. ಜಿಲ್ಲೆಯ ಎಲ್ಲಾ ತಾಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸುತ್ತಾ ಸದರಿ ವಿಷಯವನ್ನು ತಾ.ಪಂ. ಕಛೇರಿಯ ನೋಟೀಸ್ ಬೋರ್ಡಿನಲ್ಲಿ ಪ್ರಚುರಪಡಿಸಲು ಸೂಚಿಸಿದೆ ಮತ್ತು ಈ ವಿಷಯವನ್ನು ನಿಮ್ಮ ನಿಮ್ಮ ತಾಲೂಕಿನ ಮಾನ್ಯ ಶಾಸಕರುಗಳು, ಜಿ.ಪಂ.ಸದಸ್ಯರು ಮತ್ತು ತಾ.ಪಂ. ಅಧ್ಯಕ್ಷರ ಗಮನಕ್ಕೆ ತರಲು ಸೂಚಿಸಿದೆ.
7. ಜಿಲ್ಲಾ ಸೂಚನಾ ವಿಜ್ಞಾನಾಧಿಕಾರಿ, ಜಿ.ಪಂ.ಬಳ್ಳಾರಿ ಅವರಿಗೆ ಕಳುಹಿಸುತ್ತಾ, ಮೇಲಿನ ಅಧಿಸೂಚನೆಯನ್ನು ಜಿ.ಪಂ.ಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು ಕೋರಿದೆ.
8. ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಬಳ್ಳಾರಿ ಅವರಿಗೆ ಕಳುಹಿಸುತ್ತಾ ಸದರಿ ವಿಷಯವನ್ನು ಜಿಲ್ಲೆಯಲ್ಲಿ ಪ್ರಚಾರವಿರುವ ಒಂದು ದಿನಪತ್ರಿಕೆಯಲ್ಲಿ ಪ್ರಕಟಿಸಲು ಕೋರಿದೆ.

ಕಚೇರಿ ದೂರವಾಣಿ : 08392 – 266128
ಫ್ಯಾಕ್ಸ್ : 267200
ಇ–ಮೇಲ್ : admzpbly@gmail.com

# ಜಿಲ್ಲಾ ಪಂಚಾಯತಿ ಬಳ್ಳಾರಿ

## ಬಳ್ಳಾರಿ ಜಿಲ್ಲಾ ಪಂಚಾಯತಿಯ ವಿವಿಧ ಸ್ಥಾಯಿ ಸಮಿತಿಗಳಗಾಗಿ ನಡೆಸಲಿರುವ ಚುನಾವಣಾ ವೇಳಾಪಟ್ಟಿ

| ಕ್ರ.ಸಂ. | ವಿವರ | |
|---|---|---|
| | ಆಯ್ಕೆ ಮಾಡಬೇಕಾದ ಸದಸ್ಯರ ಒಟ್ಟು ಸಂಖ್ಯೆ | |
| | 1) ಸಾಮಾನ್ಯ ಸ್ಥಾಯಿ ಸಮಿತಿ | 06 |
| | 2) ಹಣಕಾಸು ಮತ್ತು ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿ | 06 |
| | 3) ಸಾಮಾಜಿಕ ನ್ಯಾಯ ಸಮಿತಿ | 07<br>(ಇದರಲ್ಲಿ ಕಡ್ಡಾಯವಾಗಿ 01 ಮಹಿಳಾ ಮತ್ತು ಪ.ಜಾ ಅಥವಾ ಪ.ಪಂ.ದ ಒಬ್ಬ ಸದಸ್ಯರು) ಕರ್ನಾಟಕ ಪಂ.ರಾಜ್ ಅದಿನಿಯಮ 1993ರ ಪ್ರಕರಣ 186(2)ರ ಅನ್ವಯ |
| | 4) ಶಿಕ್ಷಣ ಮತ್ತು ಆರೋಗ್ಯ ಸಮಿತಿ | 07 |
| | 5) ಕೃಷಿ ಮತ್ತು ಕೈಗಾರಿಕಾ ಸಮಿತಿ | 07 |
| | ಸ್ಥಾಯಿ ಸಮಿತಿಗಳ ಚುನಾವಣಾ ಪ್ರಕ್ರಿಯೆಗೆ ಗೊತ್ತುಪಡಿಸಿದ ಅಧಿಕಾರಿಗಳು | |
| | 1) ಸಾಮಾನ್ಯ ಸ್ಥಾಯಿ ಸಮಿತಿ | ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ |
| | 2) ಹಣಕಾಸು ಮತ್ತು ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿ | ಯೋಜನಾ ನಿರ್ದೇಶಕರು (ಡಿಆರ್‌ಡಿಎ) ಜಿ.ಪಂ.ಬಳ್ಳಾರಿ |
| | 3) ಸಾಮಾಜಿಕ ನ್ಯಾಯ ಸಮಿತಿ | ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬಳ್ಳಾರಿ |
| | 4) ಶಿಕ್ಷಣ ಮತ್ತು ಆರೋಗ್ಯ ಸಮಿತಿ | ಮುಖ್ಯ ಲೆಕ್ಕಾಧಿಕಾರಿ ಜಿಲ್ಲಾ ಪಂಚಾಯತ್, ಬಳ್ಳಾರಿ |
| | 5) ಕೃಷಿ ಮತ್ತು ಕೈಗಾರಿಕಾ ಸಮಿತಿ | ಉಪ ಕಾರ್ಯದರ್ಶಿ(ಅಭಿವೃದ್ಧಿ) ಜಿಲ್ಲಾ ಪಂಚಾಯತ್, ಬಳ್ಳಾರಿ |
| 3 | ನಾಮಪತ್ರ ಸ್ವೀಕರಿಸುವ ಸ್ಥಳ | ಜಿ.ಪಂ.ಕಛೇರಿಯ ಗೊತ್ತುಪಡಿಸಿದ ಅಧಿಕಾರಿಗಳ ಕೊಠಡಿ, ಬಳ್ಳಾರಿ |
| 4 | ನಾಮಪತ್ರ ಸ್ವೀಕರಿಸುವ ದಿನಾಂಕ | ದಿನಾಂಕ:14.09.2017 ರಂದು ಬೆಳಗ್ಗೆ 9.00 ಗಂಟೆಯಿಂದ ಮ.12.00ವರೆಗೆ |
| 5 | ನಾಮಪತ್ರ ಪರಿಶೀಲನೆ ಮತ್ತು ಮತಪತ್ರ ಹಿಂಪಡೆಯುವ ದಿನಾಂಕ | ದಿನಾಂಕ:14.09.2017 ರಂದು ಮ.12.00 ರಿಂದ ಮ.1.00 ರವರೆಗೆ |
| 6 | ಅವಶ್ಯವಿದ್ದಲ್ಲಿ ಮತದಾನದ ದಿನಾಂಕ ಮತ್ತು ಸಮಯ | ದಿನಾಂಕ:14.09.2017 ರಂದು ಮ.3.30 ರಿಂದ ಸಂ.5.00 ವರೆಗೆ |
| 7 | ಮತದಾನದ ಸ್ಥಳ | ಜಿ.ಪಂ.ಕಛೇರಿ, ಬಳ್ಳಾರಿ |
| 8 | ಮತಗಳ ಎಣಿಕೆ ದಿನಾಂಕ ಮತ್ತು ಸ್ಥಳ | ದಿನಾಂಕ:14.09.2017 ಸಾಯಂಕಾಲ 5.30 ಗಂಟೆಗೆ ಜಿ.ಪಂ.ಬಳ್ಳಾರಿ |

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂಚಾಯತ್, ಬಳ್ಳಾರಿ

ನಮೂನೆ – ೦೩

## ನಾಮಪತ್ರ

(೨ನೇ ವಿನಿಯಮ ನೋಡಿ)

ಬಳ್ಳಾರಿ ಜಿಲ್ಲಾ ಪಂಚಾಯತಿಯ ------------------------ ಸ್ಥಾಯಿ ಸಮಿತಿ ಸದಸ್ಯರ ಚುನಾವಣೆ

******

------------------------------------ ಸ್ಥಾಯಿ ಸಮಿತಿಯ ಸದಸ್ಯರ ಚುನಾವಣೆಯಲ್ಲಿ ಕ್ರಮಬದ್ಧವಾಗಿ ನಾಮ ನಿರ್ದೇಶಿತನಾದ ಅಭ್ಯರ್ಥಿ ------------------------------------ ಆದ ನಾನು ನನ್ನ ಉಮೇದುವಾರಿಕೆಯನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ ಎಂದು ನೋಟೀಸು ನೀಡುತ್ತಿದ್ದೇನೆ.

ಸ್ಥಳ:

ದಿನಾಂಕ:-------------- (ಅಭ್ಯರ್ಥಿಯ ಸಹಿ)

==================================================================

<u>ನೋಟೀಸು ಸ್ವೀಕೃತಿ</u>

<u>(ನೋಟೀಸನ್ನು ಒಪ್ಪಿಸುವ ವ್ಯಕ್ತಿಗೆ ನೀಡುವುದು)</u>

------------------------------------ ಸ್ಥಾಯಿ ಸಮಿತಿಯ ಸದಸ್ಯನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ನೋಟೀಸನ್ನು ---------------------------- ಇವರು ---------------------- ದಿನಾಂಕದಂದು ------------------ ಗಂಟೆಗೆ ನನಗೆ ಒಪ್ಪಿಸಿದ್ದಾರೆ.

ಸ್ಥಳ:

ದಿನಾಂಕ: ಗೊತ್ತುಪಡಿಸಿದ ಅಧಿಕಾರಿ

ನಮೂನೆ – 01

## ನಾಮಪತ್ರ

(7ನೇ ವಿನಿಯಮ ನೋಡಿ)

ಬಳ್ಳಾರಿ ಜಿಲ್ಲಾ ಪಂಚಾಯತಿಯ ______________________ ಸ್ಥಾಯಿ ಸಮಿತಿ ಸದಸ್ಯರ ಚುನಾವಣೆ

******

______________________________ ಸ್ಥಾಯಿ ಸಮಿತಿಯ ಸದಸ್ಯರ ಆಯ್ಕೆಗೆ ಅಭ್ಯರ್ಥಿಯನ್ನಾಗಿ ______________________________ ಇವರನ್ನು ನಾನು ಈ ಮೂಲಕ ನಾಮ ನಿರ್ದೇಶನ ಮಾಡಿದ್ದೇನೆ.

| | | | |
|---|---|---|---|
| 1. | ಅಭ್ಯರ್ಥಿಯ ಪೂರ್ಣ ಹೆಸರು | ➩ | |
| 2. | ಅಭ್ಯರ್ಥಿಯ ಪೂರ್ಣ ವಿಳಾಸ | ➩ | |
| 3 | ಅಭ್ಯರ್ಥಿಯು ಜಿಲ್ಲಾ ಪಂಚಾಯತಿ ಸದಸ್ಯರಾಗಿ ಆಯ್ಕೆಯಾಗಿರುವ ಕ್ಷೇತ್ರದ ಹೆಸರು ಮತ್ತು ವಿಭಾಗದ ಹೆಸರು | ➩ | |
| 4. | ಸೂಚಕರು ಜಿಲ್ಲಾ ಪಂಚಾಯತಿ ಸದಸ್ಯರಾಗಿ ಆಯ್ಕೆಯಾದ ಕ್ಷೇತ್ರದ ಹೆಸರು ವಿಭಾಗದ ಹೆಸರು | ➩ | |

ಸ್ಥಳ:

ದಿನಾಂಕ:____________

(ಸೂಚಕರ ಸಹಿ)

### ಅಭ್ಯರ್ಥಿಯ ಘೋಷಣೆ

______________________________ ಸ್ಥಾಯಿ ಸಮಿತಿಯ ಸದಸ್ಯನಾಗಿ ಚುನಾಯಿತನಾದರೆ ಆ ಸಮಿತಿಯಲ್ಲಿ ಕಾರ್ಯನಿರ್ವಹಿಸುವುದಾಗಿ ನಾನು ಈ ಮೂಲಕ ನನ್ನ ಒಪ್ಪಿಗೆ ಸೂಚಿಸಿದ್ದೇನೆ.

ಸ್ಥಳ:

ದಿನಾಂಕ:

ಅಭ್ಯರ್ಥಿಯ ಸಹಿ